## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಕರ್ನಾಟಕ ರಾಜ್ಯ ಮಕ್ಕಳ ರಕ್ಷಣಾ ನೀತಿ **2016ನ್ನು** ರಚಿಸುವ ಬಗ್ಗೆ.

**ಓದಲಾಗಿದೆ:**

1. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಶಿಕ್ಷಣ ಇಲಾಖೆ, (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ) ಇವರ ಅರೆ ಸರ್ಕಾರಿ ಪತ್ರ ಸಂಖ್ಯೆ: ಇಡಿ 358 ಪಿಜಿಸಿ 2014, ದಿನಾಂಕ: 11.11.2014.
2. ಸದಸ್ಯ ಕಾರ್ಯದರ್ಶಿ, ಕರ್ನಾಟಕ ರಾಜ್ಯ ಸಮಗ್ರ ಮಕ್ಕಳ ರಕ್ಷಣಾ ಸೊಸೈಟಿ ಇವರ ಪತ್ರ ಸಂಖ್ಯೆ: ಕೆ.ಎಸ್.ಐ.ಸಿ.ಪಿ.ಎಸ್/ಆಡಳಿತ/ಸಿಪಿಪಿ/42/2014-15, ದಿ: 22.11.2014, 08.12.2014, 02.12.2014, 29.12.2014, 03.03.2015,
3. ಸಚಿವ ಸಂಪುಟ ಟಿಪ್ಪಣಿ ಸಂಖ್ಯೆ: ಸಿ/168/2016, ದಿನಾಂಕ: 20.04.2016.

ಪ್ರಸ್ತಾವನೆ:

ಶಾಲೆಗಳಲ್ಲಿ ಮಕ್ಕಳ ಸುರಕ್ಷತೆಯ ಬಗ್ಗೆ ರಚಿಸಲಾಗಿರುವ ಉನ್ನತ ಅಧಿಕಾರಿಗಳ ಸಮಿತಿ ಸಭೆಯು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ದಿನಾಂಕ: 11.11.2014ರಂದು ನಡೆದ ಸಭೆಯಲ್ಲಿ ಚರ್ಚಿಸಿದಂತೆ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯವರು ತಯಾರಿಸಿರುವ Draft Child Protection Policy for School Safety in Karnataka ನ್ನು ಪರಿಶೀಲಿಸಿ ತಮ್ಮ ಸ್ಪಷ್ಟ ಅಭಿಪ್ರಾಯವನ್ನೊಳಗೊಂಡ ವರದಿಯನ್ನು ಸಲ್ಲಿಸುವಂತೆ ಮೇಲೆ ಕ್ರಮ ಸಂಖ್ಯೆ (1)ರಲ್ಲಿ ಓದಲಾದ ಶಿಕ್ಷಣ ಇಲಾಖೆಯ ಪತ್ರದಲ್ಲಿ ಕೋರಲಾಗಿತ್ತು.

ಕರ್ನಾಟಕ ರಾಜ್ಯದ ಬೆಂಗಳೂರು ನಗರ ಮತ್ತು ಇತರೆ ಸ್ಥಳಗಳಲ್ಲಿನ ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ, ಶೋಷಣೆ ಮತ್ತು ದುರುಪಯೋಗಕ್ಕೊಳಗಾಗುವ ಪ್ರಕರಣಗಳು ಹೆಚ್ಚುತ್ತಿರುವ ಸಂಗತಿ ಬೆಳಕಿಗೆ ಬಂದಿವೆ. ಇದನ್ನು ಮನಗಂಡು ರಾಜ್ಯ ಸರ್ಕಾರ ಸದರಿ ಪ್ರಕರಣಗಳಲ್ಲಿ ನೊಂದವರಿಗೆ ಅಲ್ಪಾವಧಿ ಪರಿಹಾರದ ಬದಲು ಪ್ರಕರಣಗಳು ಮರುಕಳಿಸದಂತೆ ಕ್ರಮ ವಹಿಸಲು ಶಾಶ್ವತ ಕಾರ್ಯವಿಧಾನವನ್ನು ಅಳವಡಿಸುವ ನಿಟ್ಟಿನಲ್ಲಿ, ಅದರಲ್ಲೂ ವಿಶೇಷವಾಗಿ ಶಾಲೆಗಳಲ್ಲಿ ಮಕ್ಕಳು ಶೋಷಣೆಗೊಳಗಾಗುವುದನ್ನು ತಪ್ಪಿಸಲು, ಕಡ್ಡಾಯವಾಗಿ ಅನುಸರಿಸಬೇಕಾದ ಕ್ರಮಗಳನ್ನೊಳಗೊಂಡ ನೀತಿಯನ್ನು ರೂಪಿಸಲು ಯೋಜಿಸಿದೆ.

ಈ ಉದ್ದೇಶಕ್ಕಾಗಿ ವಿಶೇಷ ತಜ್ಞರನ್ನು ಹಾಗೂ ಸಂಸ್ಥೆಗಳ ಪ್ರತಿನಿಧಿಗಳನ್ನೊಳಗೊಂಡ ಕಾರ್ಯನಿರತ ಗುಂಪು ಮಾರ್ಗಸೂಚಿಗಳನ್ನು ಒಳಗೊಂಡ ಕರಡು ನೀತಿಯನ್ನು ಸಿದ್ಧಪಡಿಸಿ ದಿನಾಂಕ:17.10.2014ರಂದು ಆಯೋಜಿಸಲಾಗಿದ್ದ ರಾಜ್ಯ ಮಟ್ಟದ ಸಮಾಲೋಚನಾ ಸಭೆಯಲ್ಲಿ ಮಂಡಿಸಿದೆ. ಸದರಿ ಸಮಾಲೋಚನಾ ಸಭೆಯು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಅಂದಿನ ಪ್ರಧಾನ ಕಾರ್ಯದರ್ಶಿ ಇವರ ಅಧ್ಯಕ್ಷತೆಯಲ್ಲಿ ನಡೆದಿದ್ದು, ಯುನಿಸೆಫ್‌ನ ಮಕ್ಕಳ ರಕ್ಷಣಾ ಘಟಕ, ಸ್ವಯಂ ಸೇವಾ ಸಂಸ್ಥೆಗಳ ಪ್ರತಿನಿಧಿಗಳು ಹಾಗೂ ಬಾಲನ್ಯಾಯ ಕಾಯ್ದೆಯ ಅನುಷ್ಠಾನದಲ್ಲಿ ಕಾರ್ಯನಿರತವಾಗಿರುವ ಅಧಿಕಾರಿಗಳು ಈ ಸಭೆಯಲ್ಲಿ ಭಾಗವಹಿಸಿರುತ್ತಾರೆ.

ಮಕ್ಕಳ ಹಿತದೃಷ್ಟಿಯಿಂದ ಹಾಗೂ ಮಕ್ಕಳ ರಕ್ಷಣೆಯನ್ನು ನಿಜವಾದ ಅರ್ಥದಲ್ಲಿ ಕಾರ್ಯರೂಪಕ್ಕೆ ತರಲು ಸಮಗ್ರ ಮಾರ್ಗಸೂಚಿಯನ್ನು ಈ ನೀತಿಯು ಒಳಗೊಂಡಿದ್ದು, ಇದರಲ್ಲಿ ಭಾಗವಹಿಸುವ ಎಲ್ಲಾ ಪಾಲುದಾರರು, ಸಹಭಾಗಿದಾರರು (ಸ್ಟೇಕ್ ಹೋಲ್ಡರ್ಸ್) ಗಳಿಗೆ ನಿರ್ದೇಶನ ಮತ್ತು ಕಾನೂನುಗಳು, ಯೋಜನೆಗಳು ಹಾಗೂ ಕಾರ್ಯಕ್ರಮಗಳ ಬಗ್ಗೆ ಮಾರ್ಗದರ್ಶನವನ್ನು ಒಳಗೊಂಡಿರುತ್ತದೆ.

ಸದರಿ ಮಕ್ಕಳ ರಕ್ಷಣಾ ನೀತಿಯನ್ನು ಸಾರ್ವಜನಿಕ ಶಿಕ್ಷಣ ಇಲಾಖೆಯು ತನ್ನ ವೆಬ್‌ಸೈಟ್‌ನಲ್ಲಿ ಸಾರ್ವಜನಿಕರ ಅಭಿಪ್ರಾಯಕ್ಕಾಗಿ ಅಳವಡಿಸಲಾಗಿತ್ತು.

ತದನಂತರ, ನೀತಿಯ ಮಾರ್ಗಸೂಚಿಗಳು ಹಾಗೂ ಸ್ವಯಂ ಮೌಲ್ಯಮಾಪನೆಗಾಗಿ ಪರಿಶೀಲನಾ ಪಟ್ಟಿ ಮುಂತಾದ ಸದರಿ ನೀತಿಯ ಎಲ್ಲಾ ಅಂಶಗಳನ್ನು ಸಾರ್ವಜನಿಕ ಶಿಕ್ಷಣ ಇಲಾಖೆಯ ಡಿ.ಎಸ್.ಇ.ಆರ್.ಟಿ., ಸಂಸ್ಥೆಯು ಏರ್ಪಡಿಸಿದ್ದ ತಜ್ಞರ ಸಭೆಯಲ್ಲಿ ತೀವ್ರವಾಗಿ ಸಮಾಲೋಚಿಸಲಾಗಿರುತ್ತದೆ. ತರುವಾಯ, ಬಿ–ಪ್ಯಾಕ್ ಸಂಸ್ಥೆಯು ಶಾಲೆಗಳ ಮಕ್ಕಳೊಂದಿಗೆ, ಇನ್‌ವೆಂಚರ್ ಅಕಾಡೆಮಿ ಮತ್ತು ಕನ್ಸರ್ನ್ಡ್‌ಫಾರ್ ವರ್ಕಿಂಗ್ ಚಿಲ್ಡ್ರನ್ ಸಂಸ್ಥೆಯ ವಿವಿಧ ಹಿನ್ನೆಲೆಯುಳ್ಳ ಮಕ್ಕಳೊಂದಿಗೆ, ಎನ್‌ಫೋಲ್ಡ್ ಸಂಸ್ಥೆಯ ವಿಶೇಷ ಅಗತ್ಯವುಳ್ಳ ಮಕ್ಕಳೊಂದಿಗೆ ಹಾಗೂ ಸಾರ್ವಜನಿಕ ಶಿಕ್ಷಣ ಇಲಾಖೆಯು ಆಯೋಜಿಸಿದ 700 ಸರ್ಕಾರ/ಸರ್ಕಾರೇತರ/ಅನುಧಾನಿತ/ಶಾಲೆಗಳ ಪ್ರತಿನಿಧಿಗಳೊಂದಿಗೆ ಸದರಿ ನೀತಿಯನ್ನು ಅಂತಿಮಗೊಳಿಸುವ ಮುನ್ನ ಚರ್ಚೆಗೆ ಒಳಪಡಿಸಲಾಗಿದೆ. ದಿನಾಂಕ:09.12.2014ರಂದು ಮಕ್ಕಳ ಸುರಕ್ಷಾ ನೀತಿ ಕುರಿತು ಕಾರ್ಯನಿರತ ಗುಂಪಿನವರು (ಕರಡು ನೀತಿ ರಚನಾ ಸಮಿತಿ) ವಿವಿಧ ಇಲಾಖೆಗಳೊಂದಿಗೆ, ಸ್ವಯಂ ಸೇವಾ ಸಂಸ್ಥೆ, ಮಕ್ಕಳ ಕಲ್ಯಾಣ ಸಮಿತಿಯ ಸದಸ್ಯರು ಮತ್ತು ನಿಮಾನ್ಸ್ ಸಂಸ್ಥೆಯ ತಜ್ಞರೊಂದಿಗೆ ಅಂತಿಮ ಸುತ್ತಿನ ಚರ್ಚೆ ನಡೆಸಿರುತ್ತಾರೆ.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಶಿಕ್ಷಣ, ಪೋಲೀಸ್, ನ್ಯಾಯಾಂಗ, ಜಿಲ್ಲಾಡಳಿತ, ಗ್ರಾಮೀಣ ಅಭಿವೃದ್ಧಿ ಹಾಗೂ ಪಂಚಾಯತ್‌ರಾಜ್ ಇಲಾಖೆ, ಸಾರಿಗೆ, ಸಮಾಜ ಕಲ್ಯಾಣ, ಹಿಂದುಳಿದ ವರ್ಗ ಮತ್ತು ಅಲ್ಪ ಸಂಖ್ಯಾತರ ಇಲಾಖೆ, ಪರಿಶಿಷ್ಟ ಜಾತಿ/ಪಂಗಡ ಇಲಾಖೆಗಳಂತಹ ಪ್ರಮುಖ ಇಲಾಖೆಗಳು ನಿರ್ವಹಿಸಬೇಕಾದ ಪಾತ್ರಗಳು ಮತ್ತು ಜವಾಬ್ದಾರಿಗಳು ಹಾಗೂ ಘಟನೆ ನಂತರ ವಹಿಸಬೇಕಾದ ಕ್ರಮಗಳು ಮತ್ತು ನೀಡಬೇಕಾದ ದಂಡನೆ/ಶಿಕ್ಷೆಯ ಪ್ರಮಾಣವನ್ನು ಒಳಗೊಂಡಂತೆ, ಮೇಲ್ಕಾಣಿಸಿದ ಎಲ್ಲಾ ಸಭೆಗಳಿಂದ ಹೊರಹೊಮ್ಮಲಾದ ಶಿಫಾರಸ್ಸುಗಳು ಹಾಗೂ ಸಲಹೆಗಳನ್ನು ಒಳಗೊಂಡಂತೆ, ಅಂತಿಮ ಕರಡು ನೀತಿಯಲ್ಲಿ ಅಳವಡಿಸಿಕೊಳ್ಳಲಾಗಿದೆ.

ಪ್ರತಿಯೊಂದು ಶಾಲೆಯೂ, ಅಂದರೆ ಅದು ಸರ್ಕಾರಿ ಶಾಲೆಯೇ ಆಗಿರಲಿ, ಅನುದಾನಿತ ಶಾಲೆಯೇ ಆಗಿರಲಿ, ಖಾಸಗಿ ಶಾಲೆಯೇ ಆಗಿರಲಿ, ಯಾವುದೇ ಮಂಡಳಿಗಳು ಅಥವಾ ಟ್ರಸ್ಟ್ ಮೂಲಕ ನಡೆಸುತ್ತಿರುವ ಶಾಲೆಯೇ ಆಗಿರಲಿ, ಸುರಕ್ಷೆ ಕುರಿತಂತೆ ಮಕ್ಕಳು/ಪೋಷಕರು ಮತ್ತು ಸರ್ಕಾರಕ್ಕೆ ಜವಾಬ್ದಾರರಾಗಿಸಲು, ಅಲ್ಲದೆ, ಏಕಕಾಲಿಕವಾಗಿ ತಕ್ಷಣದ ಶಿಶು ಸಂವೇದಿತ ಪ್ರತಿಕ್ರಿಯಾತ್ಮಕ ಕ್ರಮಗಳನ್ನು ಸಂಬಂಧಪಟ್ಟ ಇಲಾಖೆಯ ಮೂಲಕ ಕೈಗೊಳ್ಳಲು ನೆರವಾಗುವಂತೆ ಸಕಾಲಕ್ಕೆ ಸ್ಪಂದಿಸುವ ಹಾಗೂ ದೂರು ನಿವಾರಣೆ ವ್ಯವಸ್ಥೆಯನ್ನು ಸಮನ್ವಯಾತ್ಮಕ ಕ್ರಮಗಳ ಮೂಲಕ ಜಾರಿಗೆ ತರುವ ಕುರಿತು ಖಚಿತಪಡಿಸಿಕೊಳ್ಳಲು ಕರ್ನಾಟಕ ರಾಜ್ಯದ ಶಾಲೆಗಳಲ್ಲಿ ಮಕ್ಕಳಿಗಾಗಿ ಸುರಕ್ಷಾ ನೀತಿಯು ಶ್ರಮಿಸುತ್ತದೆ.

ಕರ್ನಾಟಕ ಶಾಲೆಗಳಲ್ಲಿನ ಮಕ್ಕಳ ಸುರಕ್ಷಾ ನೀತಿಯನ್ನು ಪ್ರತಿ ವರ್ಷ ಪರಿಶೀಲನೆ ಮಾಡಲು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಇವರು ನೋಡಲ್ ಅಧಿಕಾರಿಯಾಗಿರುತ್ತಾರೆ. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಸಹಯೋಗದೊಂದಿಗೆ ಸಾರ್ವಜನಿಕ ಶಿಕ್ಷಣ ಆಯುಕ್ತರು ಈ ಪರಿಶೀಲನೆಗೆ ಅನುವು ಮಾಡಿಕೊಡುವರು.

ಸಂಬಂಧಿಸಿದ ಸರ್ಕಾರಿ ಇಲಾಖೆಗಳು, ಶಿಕ್ಷಣ ಸಂಸ್ಥೆಗಳು, ಇತರ ಶಾಸನಬದ್ಧ ರಚನೆಗಳು, ವಿವಿಧ ಶಾಸನಗಳಡಿ ಕಾರ್ಯ ನಿರ್ವಹಿಸುತ್ತಿರುವ ವ್ಯಕ್ತಿಗಳು ಶಾಲೆಗಳಲ್ಲಿ ಮಕ್ಕಳ ಸುರಕ್ಷಾ ನೀತಿ ಕುರಿತಂತೆ ಕಾರ್ಯ

ವಿಧಾನಗಳು ಮತ್ತು ಸುರಕ್ಷಾ ಕ್ರಮಗಳನ್ನು ವ್ಯವಸ್ಥೆಯಲ್ಲಿ ಹಂತ ಹಂತವಾಗಿ ಅಳವಡಿಸಲು ಕ್ರಮ ಕೈಗೊಳ್ಳುವುದು. ಶಾಲೆಗಳಲ್ಲಿ ಸುರಕ್ಷಾ ಕ್ರಮಗಳ ಕುರಿತ ಸೂಚನೆಗಳನ್ನು ಪಾಲಿಸದೆ ಇರುವ ಸಂದರ್ಭಗಳಲ್ಲಿ ಉಚ್ಚ ನ್ಯಾಯಾಲಯದ ನಿರ್ದೇಶನಗಳ ಮೇರೆಗೆ ರಚಿಸಲಾಗಿರುವ ಉನ್ನತಾಧಿಕಾರಿ ಸಮಿತಿಯ ಅನುಮೋದನೆ ಪಡೆದು ದಂಡನೆ/ಶಿಕ್ಷೆಯ ಕ್ರಮಗಳನ್ನು ಅನುಷ್ಠಾನಗೊಳಿಸಲು ಕರಡು ನೀತಿಯಲ್ಲಿ ಅವಕಾಶ ಕಲ್ಪಿಸಲಾಗಿದೆ. ಆದರೆ ಈ ರೀತಿಯ ದಂಡನೆ ಅಥವಾ ಶಿಸ್ತು ಕ್ರಮ ಅಥವಾ ಇತರ ಯಾವುದೇ ಕ್ರಮಗಳನ್ನು ಕೈಗೊಂಡ ಸಂದರ್ಭಗಳಲ್ಲಿ ಮಕ್ಕಳಿಗೆ ತೊಂದರೆಯಾಗದಂತೆ, ಶಿಕ್ಷಣಕ್ಕೆ ಅಡಚಣೆಯಾಗದಂತೆ, ಮಗು ಸಂಕಷ್ಟ ಪರಿಸ್ಥಿತಿಗೆ ಒಳಗಾಗದಂತೆ ಖಚಿತಪಡಿಸಿಕೊಳ್ಳುವುದು.

ಮಕ್ಕಳ ಸ್ನೇಹಿ ಒಡನಾಟವನ್ನಾಧರಿಸಿದ ಒಂದು ಸಮಗ್ರ ನೀತಿಯು ರಾಜ್ಯದಲ್ಲಿನ ಮಕ್ಕಳ ರಕ್ಷಣೆಗೆ ತಳಪಾಯವಾಗಿದ್ದು, ಮಕ್ಕಳ ಹಿತದೃಷ್ಟಿಯಿಂದ ಈ ನೀತಿಯ ಅನುಷ್ಠಾನಕ್ಕೆ ತೊಡಗಿಸಿಕೊಂಡ ಸರ್ಕಾರಿ ಇಲಾಖೆಗಳು, ಚುನಾಯಿತ ಪ್ರತಿನಿಧಿಗಳು ಮತ್ತು ಸರ್ಕಾರೇತರ ಸಂಸ್ಥೆಗಳನ್ನು ಒಳಗೊಂಡಂತೆ ಹಲವಾರು ಸಹಭಾಗಿದಾರರಿಗೆ ನಿರ್ದೇಶನಗಳನ್ನು ಒದಗಿಸಲು ಹಾಗೂ ಕಾನೂನು, ಯೋಜನೆ ಮತ್ತು ಕಾರ್ಯಕ್ರಮಗಳನ್ನು ರೂಪಿಸಲು ರಾಜ್ಯಕ್ಕೆ ಮಾರ್ಗದರ್ಶನ ನೀಡುವಂತಹ ಮಕ್ಕಳ ಸುರಕ್ಷತೆ ಕುರಿತ ಒಂದು ಸಮಗ್ರ ದೃಷ್ಟಿಕೋನವು ಮಕ್ಕಳ ಸಂರಕ್ಷಣೆಯನ್ನು ಸಾಕಾರಗೊಳಿಸಲು ಅತ್ಯಗತ್ಯವಾಗಿದೆ. ಈ ಹಿನ್ನಲೆಯಲ್ಲಿ ರಾಜ್ಯ ಸರ್ಕಾರವು ಶಿಕ್ಷಣ ಸಂಸ್ಥೆಗಳಿಗಾಗಿ ಕರ್ನಾಟಕ ಮಕ್ಕಳ ಸುರಕ್ಷತಾ ನೀತಿ 2016ನ್ನು ರೂಪಿಸಿದೆ.

ಕರ್ನಾಟಕ ರಾಜ್ಯದ ಶಾಲೆಗಳಲ್ಲಿ **"ಮಕ್ಕಳ ಸುರಕ್ಷತಾ ನೀತಿ, 2016"**ನ್ನು ರಚಿಸುವ ಬಗ್ಗೆ ಕಾನೂನು ಇಲಾಖೆ, ಸಂಸದೀಯ ವ್ಯವಹಾರಗಳ ಇಲಾಖೆ, ಶಿಕ್ಷಣ ಇಲಾಖೆಗಳಿಂದ ಅಭಿಪ್ರಾಯ ಪಡೆಯಲಾಗಿದೆ. ಹಾಗೂ ಒಳಾಡಳಿತ ಇಲಾಖೆ ಮತ್ತು ಸಾರಿಗೆ ಇಲಾಖೆಯಿಂದ ಕೆಲವೊಂದು ಸಲಹೆಗಳನ್ನು ಪಡೆಯಲಾಗಿದೆ.

ಮಕ್ಕಳ ಸುರಕ್ಷ ನೀತಿಯ ಬಗ್ಗೆ ದಿನಾಂಕ: 27.11.2015ರಂದು ರಾಜ್ಯ ಮಟ್ಟದಲ್ಲಿ ಮುಕ್ತ ಸಂವಾದವನ್ನು ಏರ್ಪಡಿಸಲು ನಿರ್ಣಯಿಸಿ ಸದರಿ ಸಂವಾದ ಕುರಿತು ವ್ಯಾಪಕ ಪ್ರಚಾರವನ್ನು ಹೆಚ್ಚು ಪ್ರಚಲಿತದಲ್ಲಿರುವ ವಿಜಯವಾಣಿ ದಿನ ಪತ್ರಿಕೆಯಲ್ಲಿ ದಿನಾಂಕ: 23.11.2015ರಂದು ಮತ್ತು ದಿ ಹಿಂದೂ ಪತ್ರಿಕೆಯಲ್ಲಿ ದಿನಾಂಕ: 25.11.2015, ದಿ ಟೈಮ್ಸ್ ಆಫ್ ಇಂಡಿಯಾ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ಜಾಹಿರಾತುಗಳನ್ನು ಪ್ರಕಟಿಸುವ ಮೂಲಕ ಮೇಲಿನ ಕರಡು ನೀತಿ ಕುರಿತು ಸಾರ್ವಜನಿಕರಿಗೆ/ಶಿಕ್ಷಣ ಸಂಸ್ಥೆಗಳಿಗೆ ಮುಕ್ತ ಆಹ್ವಾನ ನೀಡಲಾಗಿತ್ತು. ಅದರಂತೆ 1000 ಜನ ಆಹ್ವಾನಿತರು ಭಾಗವಹಿಸಿದ್ದ ಈ ಸಂವಾದ ಕಾರ್ಯಕ್ರಮದಲ್ಲಿ ಶಿಕ್ಷಣ ಸಂಸ್ಥೆಗಳ ಆಡಳಿತ ಮಂಡಳಿ, ಸ್ವಯಂ ಸೇವಾ ಸಂಸ್ಥೆಗಳ ಶಾಲಾ ಅಭಿವೃದ್ಧಿ ಸಮಿತಿಗಳ ಪ್ರತಿನಿಧಿಗಳು ಭಾಗವಹಿಸಿದ್ದು, ತಮ್ಮ ಅನಿಸಿಕೆ ಮತ್ತು ಅಭಿಪ್ರಾಯಗಳನ್ನು ನೀಡಿರುತ್ತಾರೆ.

ಅಲ್ಲದೆ ಈ ಸಾರ್ವಜನಿಕ ಮುಕ್ತ ಸಂವಾದದ ಕಾರ್ಯಕ್ರಮವನ್ನು ರಾಜ್ಯದ ಎಲ್ಲಾ ಜಿಲ್ಲೆಗಳು ದಿನಾಂಕ: 30.11.2015ರಿಂದ 07.12.2015ರವರೆಗೆ ಸಾರ್ವಜನಿಕ ಸಮಾಲೋಚನೆ ಸಭೆ ನಡೆಸಿ ಭಾಗವಹಿಸಿದವರಿಂದ ಕರಡು ನೀತಿಯ ಬಗ್ಗೆ ಮಾಹಿತಿಯನ್ನು ಪಡೆಯಲಾಗಿದೆ.

ಸದರಿ ಸಂವಾದದ ನಂತರ ಸಾರ್ವಜನಿಕರ ಅಭಿಪ್ರಾಯ ಹಾಗೂ ವಿಷಯ ತಜ್ಞರ ಅಭಿಪ್ರಾಯದಂತೆ ಕರಡು ನೀತಿಯನ್ನು ಮಾರ್ಪಡಿಸಲಾಗಿದೆ.

ಪರಿಷ್ಕೃತ ಕರಡು ನೀತಿಯಲ್ಲಿ 2 ಭಾಗಗಳಿದ್ದು, ಭಾಗ-1 ಮತ್ತು ಭಾಗ-2 ಒಳಗೊಂಡಿರುತ್ತದೆ.

ಪರಿಷ್ಕೃತ ಕರಡು ನೀತಿಯ ಭಾಗ-1 :ಇದನ್ನು **"ಕರ್ನಾಟಕ ರಾಜ್ಯ ಮಕ್ಕಳ ರಕ್ಷಣಾ ನೀತಿ"** ಎಂದು ಕರೆಯಲಾಗುವುದು. ಇದು ರಾಜ್ಯದಲ್ಲಿ ಯಾವುದೇ ಪರಿಸ್ಥಿತಿಯಲ್ಲಿರುವ ಮಕ್ಕಳಿಗೆ, ಮಕ್ಕಳ ರಕ್ಷಣೆಗಾಗಿ ಕಾರ್ಯ ನಿರ್ವಹಿಸುವವರಿಗೆ ಮಾರ್ಗಸೂಚಿಯಾಗಿರುತ್ತದೆ. ಈ ಭಾಗದಲ್ಲಿ ನೀತಿಯ ಬಗ್ಗೆ ಸ್ಪಷ್ಟವಾಗಿ ತಿಳಿಸಲಾಗಿದೆ.

ಪರಿಷ್ಕೃತ ಕರಡು ನೀತಿಯ ಭಾಗ-2: ಇದನ್ನು **"ಕರ್ನಾಟಕ ರಾಜ್ಯ ಮಕ್ಕಳ ರಕ್ಷಣೆ ನೀತಿಯಡಿ ಶಿಕ್ಷಣ ಸಂಸ್ಥೆಗಳಿಗೆ ಕಾರ್ಯಾಚರಣೆ ಮಾರ್ಗಸೂಚಿಗಳು ಮತ್ತು ವಿಧಾನಗಳು"** ಎಂದು ಕರೆಯಲಾಗಿದೆ.

ಶಾಲೆಗಳು ತಮ್ಮದೇ ಆದ ಮಕ್ಕಳ ಸುರಕ್ಷಾ ಕ್ರಮ/ನೀತಿಗಳನ್ನು ಅಭಿವೃದ್ಧಿಪಡಿಸಿಕೊಳ್ಳಲು ಸಹ ಕರಡು ಸುರಕ್ಷಾ ನೀತಿಯು ಅವಕಾಶ ಕಲ್ಪಿಸಿರುತ್ತದೆ.

ಕರ್ನಾಟಕದ ಶೈಕ್ಷಣಿಕ ಸಂಸ್ಥೆಗಳಲ್ಲಿನ ಆಡಳಿತ ಮಂಡಳಿಗಳು, ಶಿಕ್ಷಕರು ಮತ್ತು ಪೋಷಕರಿಗೆ ಮಕ್ಕಳ ಸುರಕ್ಷೆ ಮತ್ತು ರಕ್ಷಣೆ ಕುರಿತಂತೆ ಜವಾಬ್ದಾರಿ ಹಂಚಿಕೆಯ ಅಂಶವನ್ನು ಮಕ್ಕಳ ಸುರಕ್ಷಾ ನೀತಿಯು ಪರಿಗಣಿಸುತ್ತದೆ.

ಕರಡು ನೀತಿಯಲ್ಲಿ ವಿವಿಧ ಭಾಗಿದಾರ ಇಲಾಖೆಗಳು ಹಾಗೂ ವಾರ್ತಾ ಇಲಾಖೆಗಳಂತಹ ಪ್ರಮುಖ **ಇಲಾಖೆಗಳು ನಿರ್ವಹಿಸಬೇಕಾದ ಪಾತ್ರಗಳು ಮತ್ತು ಜವಾಬ್ದಾರಿಗಳು, ಮಾಧ್ಯಮದ ನೀತಿ ಸಂಹಿತೆ ಹಾಗೂ ಘಟನೆ ನಂತರ ವಹಿಸಬೇಕಾದ ಕ್ರಮಗಳು, ಮೇಲ್ವಿಚಾರಣೆ ಹಾಗೂ ಮಾಹಿತಿ ಸಂಗ್ರಹಣೆಗಾಗಿ ಅವಶ್ಯಕ ಉಪಕರಣಗಳ ಅಳವಡಿಕೆ, ಮತ್ತು ದಂಡನೆ/ಶಿಕ್ಷೆಯ ಕ್ರಮಗಳ ಬಗ್ಗೆ ತಿಳಿಸಲಾಗಿದೆ.**

ಒಟ್ಟಿನಲ್ಲಿ ಶಿಕ್ಷಣ ಸಂಸ್ಥೆಗಳು, ಸ್ವಯಂ ಸೇವಾ ಸಂಸ್ಥೆಗಳಿಂದ ಸಕಾರಾತ್ಮಕ ಅಭಿಪ್ರಾಯ ಬಂದಿರುತ್ತದೆ. ಹಾಗೂ ಈ ನೀತಿಯ ಅನುಷ್ಠಾನ ಮಾಡುವ ಬಗ್ಗೆ ವ್ಯಾಪಕ ಪ್ರಚಾರ ನೀಡುವಂತೆ ಸಲಹೆ ನೀಡಿರುತ್ತಾರೆ. ಸಂವಿಧಾನದಲ್ಲಿ ಉಲ್ಲೇಖಿಸಿರುವ ಮಕ್ಕಳ ಹಕ್ಕುಗಳ ರಕ್ಷಣೆ ಸರ್ಕಾರದ ಮತ್ತು ಸಮಾಜದ ಜವಾಬ್ಧಾರಿಯಾಗಿರುವುದರಿಂದ ಮಕ್ಕಳ ರಕ್ಷಣೆಗಾಗಿ ಒಂದು ಸಮಗ್ರ ನೀತಿಯನ್ನು ರಚಿಸಲು ಸರ್ಕಾರ ಬದ್ದವಾಗಿರುತ್ತದೆ.

ಮೇಲ್ಕಂಡ ಅಂಶಗಳನ್ನು ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

**ಆದೇಶ ಸಂಖ್ಯೆ: ಮಮಇ 259 ಮಭಾಬ 2014, ಬೆಂಗಳೂರು, ದಿನಾಂಕ: 30.04.2016.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ **"ಕರ್ನಾಟಕ ರಾಜ್ಯ ಮಕ್ಕಳ ರಕ್ಷಣಾ ನೀತಿ** 2016ನ್ನು ಅನುಬಂಧದಲ್ಲಿ ಇರುವಂತೆ ರಚಿಸಿ ಈ ತಕ್ಷಣದಿಂದ ಜಾರಿಗೆ ಬರುವಂತೆ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಸಂಧ್ಯಾ ಎಲ್. ನಾಯಕ್)
ಸರ್ಕಾರದ ಅಧೀನ ಕಾರ್ಯದರ್ಶಿ-1,
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ
ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ
ಇಲಾಖೆ.

ಇವರಿಗೆ:

ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಕೆಂಗೇರಿ ಪೋಸ್ಟ್, ಬೆಂಗಳೂರು–ಮುಂದಿನ ರಾಜ್ಯ ಪತ್ರದಲ್ಲಿ ಇದನ್ನು ಪ್ರಕಟಿಸಿ 2000 ಪ್ರತಿಗಳನ್ನು ಈ ಇಲಾಖೆಗೆ ಕಳುಹಿಸಿಕೊಡುವಂತೆ ಕೋರಲಾಗಿದೆ.

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಒಳಾಡಳಿತ ಇಲಾಖೆ, ವಿಧಾನಸೌಧ.
2. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಶಿಕ್ಷಣ ಇಲಾಖೆ(ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ) ಬಹುಮಹಡಿ ಕಟ್ಟಡ.
3. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕಾನೂನು ಇಲಾಖೆ, ವಿಧಾನಸೌಧ.
4. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಸಂಸದೀಯ ವ್ಯವಹಾರಗಳ ಇಲಾಖೆ, ವಿಧಾನಸೌಧ.
5. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಸಾರಿಗೆ ಇಲಾಖೆ, ಬಹುಮಹಡಿ ಕಟ್ಟಡ.
6. ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೆಂಗಳೂರು.
7. ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಕರ್ನಾಟಕ ಸರ್ಕಾರ, ಬೆಂಗಳೂರು.
8. ಸದಸ್ಯ ಕಾರ್ಯದರ್ಶಿ, ಕರ್ನಾಟಕ ರಾಜ್ಯ ಸಮಗ್ರ ಮಕ್ಕಳ ರಕ್ಷಣಾ ಸೊಸೈಟಿ, ಬೆಂಗಳೂರು.
9. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.
10. ಎಲ್ಲಾ ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು. (ಆಯುಕ್ತರ ಮುಖಾಂತರ)
11. ಎಲ್ಲಾ ಜಿಲ್ಲಾಧಿಕಾರಿಗಳು/ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳು (ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಇವರ ಮುಖಾಂತರ.)
12. ಕಾರ್ಯದರ್ಶಿ, ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ, ಕೃಷಿಭವನ, ನೃಪತುಂಗ ರಸ್ತೆ, ಬೆಂಗಳೂರು.
13. ಕಾರ್ಯದರ್ಶಿ, ಕರ್ನಾಟಕ ರಾಜ್ಯ ಮಹಿಳಾ ಆಯೋಗ, ಬೆಂಗಳೂರು.
14. ವಾರ್ತಾಧಿಕಾರಿ, ವಾರ್ತಾ ಇಲಾಖೆ.
15. ಎಲ್ಲಾ ಉಪ ನಿರ್ದೇಶಕರು/ಸಹಾಯಕ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ.(ನಿರ್ದೇಶಕರ ಮುಖಾಂತರ)
16. ಜಿಲ್ಲಾ, ತಾಲ್ಲೂಕು ಮತ್ತು ಗ್ರಾಮ ಮಟ್ಟದ ಕಾವಲು ಸಮಿತಿಗಳ ಎಲ್ಲಾ ಸದಸ್ಯರು (ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆರವರ ಮುಖಾಂತರ.)
17. ಶಾಖಾರಕ್ಷ ಕಡತ/ ಹೆಚ್ಚುವರಿ ಪ್ರತಿಗಳು.

**ಪ್ರತಿಯನ್ನು ಮಾಹಿತಿಗಾಗಿ:**

1. ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರ ಆಪ್ತಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಇವರ ಆಪ್ತಕಾರ್ಯದರ್ಶಿ.

ನಿರ್ದೇಶಕರು, ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳ ಇಲಾಖೆ, ಕಾ.ಸೂ. 008 – ಪ್ರತಿಗಳು–100–ಪಿ2

## ಮಕ್ಕಳನ್ನು ಮನೆಯಿಂದ ಶಾಲೆಗೆ ಮತ್ತು ಶಾಲೆಯಿಂದ ಮನೆಗೆ ಕರೆದೊಯ್ಯುವ ವಿವಿಧ ಬಗೆಯ ಒಪ್ಪಂದದ ವಾಹನಗಳಾದ ಮೋಟಾರು ಕ್ಯಾಬ್/ ಮ್ಯಾಕ್ಸಿ ಕ್ಯಾಬ್/ ಓಮಿನಿ ಬಸ್‌ಗಳು ಕಡ್ಡಾಯವಾಗಿ ಪಾಲಿಸಬೇಕಾದ ಮಾರ್ಗಸೂಚಿಗಳು

ಭಾರತದ ಗೌರವಾನ್ವಿತ ಸರ್ವೋಚ್ಚ ನ್ಯಾಯಾಯಲವು ರಿಟ್ ಅರ್ಜಿ ಸಂಖ್ಯೆ (Civil) 13029 of 1985 ರಲ್ಲಿ ಮಕ್ಕಳನ್ನು ಮನೆಯಿಂದ ಶಾಲೆಗೆ ಮತ್ತು ಶಾಲೆಯಿಂದ ಮನೆಗೆ ಕರೆದೊಯ್ಯುವ ಶಾಲಾ ವಾಹನಗಳಲ್ಲಿ ವಹಿಸಬೇಕಾದ ಕ್ರಮಗಳ ಬಗ್ಗೆ ವಿಸ್ತಾರವಾದ ಸೂಚನೆಗಳನ್ನು ನೀಡಿದೆ. ಭಾರತದ ಗೌರವಾನ್ವಿತ ಸರ್ವೋಚ್ಚ ನ್ಯಾಯಾಯಲದ ಆದೇಶದನ್ವಯ ಶಾಲಾ ಮಕ್ಕಳನ್ನು ಕರೆದೊಯ್ಯುವ ವಿವಿಧ ಬಗೆಯ ಒಪ್ಪಂದದ ವಾಹನಗಳಾದ ಮೋಟಾರು ಕ್ಯಾಬ್/ ಮ್ಯಾಕ್ಸಿ ಕ್ಯಾಬ್/ ಓಮಿನಿ ಬಸ್‌ಗಳು ಕಡ್ಡಾಯವಾಗಿ ಪಾಲಿಸಲು, ಕೆಳಕಂಡ ಮಾರ್ಗಸೂಚಿಗಳನ್ನು ಹೊರಡಿಸಲಾಗಿದೆ.

1. ವಾಹನವು 'ಪ್ರಯಾಣಿಕರ ಸಾರಿಗೆ ವಾಹನ' ಎಂಬುದಾಗಿ ಸಕ್ಷಮ ಪ್ರಾಧಿಕಾರದಿಂದ ನೀಡಲಾದ ಸೂಕ್ತ ಪರವಾನಗಿಯನ್ನು ಹೊಂದಿರಬೇಕು.
2. ಶಾಲಾ ಮಕ್ಕಳನ್ನು ಕರೆದೊಯ್ಯುವ ವಾಹನಗಳ ಮುಂಬಾಗ ಮತ್ತು ಹಿಂಬಾಗದಲ್ಲಿ 'ಶಾಲಾ ಕರ್ತವ್ಯದ ಮೇರೆಗೆ' ಎಂದು ಶಾಶ್ವತವಾಗಿ ಬರೆಸುವುದು.
3. ಶಾಲಾ ವಾಹನವು ಪರವಾನಗಿ ನೀಡಲಾದ ಆಸನ ಸಾಮರ್ಥ್ಯಕ್ಕಿಂತ ಹೆಚ್ಚಿನ ಮಕ್ಕಳನ್ನು ಕರೆದೊಯ್ಯತಕ್ಕದ್ದಲ್ಲ. ಯಾವುದೇ ಮಗು ಬೇರೆಯವರ ತೊಡೆಯ ಮೇಲೆ ಕೂರದಂತೆ ನೋಡಿಕೊಳ್ಳುವುದು.
4. ವಾಹನದಲ್ಲಿ ಪ್ರಥಮ ಚಿಕಿತ್ಸಾ ಪೆಟ್ಟಿಗೆ ಹಾಗೂ ಕುಡಿಯುವ ನೀರಿನ ವ್ಯವಸ್ಥೆಯನ್ನು ಕಡ್ಡಾಯವಾಗಿ ಮಾಡುವುದು.
5. ಸಾಧ್ಯವಿರುವೆಡೆ ಆಸನ ಬೆಲ್ಟ್‌ಗಳನ್ನು ಕಡ್ಡಾಯವಾಗಿ ಜೋಡಿಸುವುದು.
6. ವಾಹನದಲ್ಲಿ ಶಾಲೆಯ ಹೆಸರು ಮತ್ತು ದೂರವಾಣಿ ಸಂಖ್ಯೆಗಳನ್ನು ಕಡ್ಡಾಯವಾಗಿ ನಮೂಧಿಸುವುದು.
7. ಶಾಲಾ ವಾಹನವನ್ನು ಚಾಲನೆಮಾಡುವ ಚಾಲಕ ಅಂತಹ ವಾಹನಗಳ ಚಾಲನೆಯಲ್ಲಿ ಕನಿಷ್ಠ 05 ವರ್ಷಗಳ ಅನುಭವಹೊಂದಿರುವುದು ಮತ್ತು ಆತನ ಮೇಲೆ ಸಂಚಾರ ನಿಯಮಗಳನ್ನು ಉಲ್ಲಂಘಿಸಿರುವ ಅಪರಾಧಗಳು ವರದಿಯಾಗಿರಬಾರದು.
8. ಶಾಲಾ ಮಕ್ಕಳನ್ನು ಕರೆದೊಯ್ಯುವ ಒಪ್ಪಂದದ ವಾಹನಗಳನ್ನು ಬಳಸುವಾಗ, ವಾಹನದ ಮಾಲೀಕರು ವಾಹನ ಚಾಲಕನ ಹೆಸರು ಮತ್ತು ವಾಹನದ ವಿವರಗಳನ್ನು ಸ್ಥಳೀಯ ಪೋಲಿಸ್ ಠಾಣೆಯ ಪಿ.ಸಿ ಮತ್ತು ಡಿಸಿ (ಟ್ರಾಫಿಕ್)/ ಜಿಲ್ಲೆಯ ಎಸ್‌ಪಿರವರಿಗೆ ನೀಡುವುದು.
9. ಮಕ್ಕಳು ಸುರಕ್ಷಿತವಾಗಿ ಪ್ರಯಾಣಿಸುವಂತೆ ನೋಡಿಕೊಳ್ಳಲು ಮತ್ತು ಅವರು ಕ್ಷೇಮವಾಗಿ ವಾಹನವನ್ನು ಹತ್ತುವುದಕ್ಕೆ ಮತ್ತು ಇಳಿಯುವುದಕ್ಕೆ ನೆರವು ನೀಡಲು ವಾಹನದಲ್ಲಿ ಒಬ್ಬರು ಸಹಾಯಕರನ್ನು ನೇಮಿಸುವುದು.

*****

# ಕರ್ನಾಟಕ ರಾಜ್ಯ ಮಕ್ಕಳ ರಕ್ಷಣಾ ನೀತಿ–2016
# ಕರ್ನಾಟಕದಲ್ಲಿ ಹಕ್ಕು ಆಧಾರಿತ ಮಕ್ಕಳ ರಕ್ಷಣೆ
## ಕರ್ನಾಟಕ ರಾಜ್ಯ ಮಕ್ಕಳ ರಕ್ಷಣಾ ನೀತಿಯಡಿ ಶೈಕ್ಷಣಿಕ ಸಂಸ್ಥೆಗಳಿಗಾಗಿ ರೂಪಿಸಲಾಗಿರುವ ಕಾರ್ಯನಿರ್ವಹಣಾ ಮಾರ್ಗಸೂಚಿಗಳು ಮತ್ತು ಕಾರ್ಯವಿಧಾನಗಳು.

(Brief-related CPC only for full details pleas read the full document)

## 4.2.1 ಮಕ್ಕಳ ರಕ್ಷಣಾ ಸಮಿತಿ (CPC)

ಪ್ರತಿಯೊಂದು ಶಿಕ್ಷಣ ಸಂಸ್ಥೆಯೂ ಕೆಳಕಂಡವರನ್ನೊಳಗೊಂಡ ಮಕ್ಕಳ ರಕ್ಷಣಾ ಸಮಿತಿಯನ್ನು ರಚಿಸುವುದು.

_ ಸಂಸ್ಥೆಯ ಮುಖ್ಯಸ್ಥರು ಸಮಿತಿಯ ಅಧ್ಯಕ್ಷರಾಗಿರುವರು
_ ಒಬ್ಬರು ಅಥವಾ ಇಬ್ಬರು ಶಿಕ್ಷಕರಲ್ಲಿ, ಒಬ್ಬರನ್ನು ಮಕ್ಕಳ ರಕ್ಷಣಾ ಅಧಿಕಾರಿಯನ್ನಾಗಿ ನಿಯೋಜಿಸುವುದು.
_ ಶಿಕ್ಷಣ ಸಂಸ್ಥೆಯ ಸಾಮರ್ಥ್ಯದನ್ವಯ ಇಬ್ಬರು/ಮೂವರು ಪೋಷಕರಲ್ಲಿ ಒಬ್ಬ ಮಹಿಳೆ ಸಮಿತಿಯಲ್ಲಿರುವರು. ಶಾಲಾಆಡಳಿತ ಮಂಡಳಿ/ ಪೋಷಕ–ಶಿಕ್ಷಕರ ಸಂಘವಿದ್ದಲ್ಲಿ (SMC/PTA) ಸದರಿ ಸಮಿತಿಯ ಒಬ್ಬ ಪೋಷಕರನ್ನು ಒಬ್ಬ ಸದಸ್ಯರನ್ನಾಗಿ ಸೇರಿಸಿಕೊಳ್ಳುವುದು.
_ 8ನೇ ತರಗತಿ ಅಥವಾ ಅದಕ್ಕಿಂತ ಉನ್ನತ ತರಗತಿಗಳ ಎರಡು ಅಥವಾ ಹೆಚ್ಚಿನ ವಿದ್ಯಾರ್ಥಿಗಳನ್ನು ಸಮಾನ ಲಿಂಗಾನುಪಾತದನ್ವಯ ಪ್ರತಿನಿಧಿಸುವಿಕೆಯನ್ನು ಹೊಂದಿರುವುದು.
_ ಭದ್ರತಾ ಅಧಿಕಾರಿ (ಶಿಕ್ಷಣ ಸಂಸ್ಥೆಯು ಭದ್ರತಾ ಸಿಬ್ಬಂದಿಯನ್ನು ಹೊಂದಿದ್ದಲ್ಲಿ)

**ಮಕ್ಕಳ ರಕ್ಷಣಾ ಸಮಿತಿಯು ನಿರ್ವಹಿಸಬೇಕಾದ ಸಾಮಾನ್ಯ ಪಾತ್ರಗಳು ಮತ್ತು ಜವಾಬ್ದಾರಿಗಳು :**

1. ಮಕ್ಕಳ ರಕ್ಷಣಾ ಸಮಿತಿಯು 3 ತಿಂಗಳಿಗೊಮ್ಮೆ ಮತ್ತು ಸುರಕ್ಷತೆ ಉಲ್ಲಂಘನೆಯಾಗಿರುವ ಬಗ್ಗೆ ವರದಿಯಾದಾಗ ಸಭೆ ಸೇರುವುದು.
2. ತ್ರೈಮಾಸಿಕ ಸಭೆಯಲ್ಲಿ ಹಿಂದಿನ ಸಬೆಯಲ್ಲಿ ಚರ್ಚಿಸಲಾದ ಕಾರ್ಯಸೂಚಿಯನ್ನು ಪರಿಶೀಲಿಸುವುದು. ಈ ಅವಧಿಯಲ್ಲಿ ಕಂಡುಬಂದಿರುವ ಯಾವುದೇ ಬೆದರಿಕೆ/ಅಪಾಯಗಳು ಮತ್ತು ಸಂಸ್ಥೆಯಲ್ಲಿ ಮಕ್ಕಳ ರಕ್ಷಣಾ ಕ್ರಮಗಳನ್ನು ಬಲಪಡಿಸಲು ತೆಗೆದುಕೊಳ್ಳಬೇಕಾಗಿರುವ ಹೆಚ್ಚುವರಿ ಕ್ರಮಗಳ ಬಗ್ಗೆ ಚರ್ಚಿಸುವುದು.
3. ಮಕ್ಕಳ ರಕ್ಷಣಾ ಸಮಿತಿಯು ಮಗುವಿನ ಸುರಕ್ಷತೆಯಡಿ ಆಗಿರುವ ಉಲ್ಲಂಘನೆಗಳು/ದುರುಪಯೋಗಗಳ ಬಗ್ಗೆ ಬಂದಿರುವ ದೂರುಗಳು/ಶಿಫಾರಸ್ಸುಗಳ ಬಗ್ಗೆ ಮಾತ್ರ ಆದ್ಯತೆ ನೀಡಬೇಕೇ ಹೊರತು ಶಿಕ್ಷಣ ಸಂಸ್ಥೆಯ ಯಾವುದೇ ಆಡಳಿತಾತ್ಮಕ ಸಮಸ್ಯೆಗಳಿಗೆ ಗಮನ ನೀಡುವಂತಿಲ್ಲ.
4. ಮಕ್ಕಳ ರಕ್ಷಣಾ ಸಮಿತಿಯು ಕಾಳಜಿಗಳ ಬಗ್ಗೆ ಚರ್ಚಿಸಿ ಅವುಗಳನ್ನು ದಾಖಲಿಸುವುದು ಮತ್ತು ಸೂಕ್ತ ಶಿಫಾರಸ್ಸುಗಳೊಂದಿಗೆ ಮುಂದಿನ ಕ್ರಮಕ್ಕಾಗಿ ಶಿಕ್ಷಣ ಸಂಸ್ಥೆಯ ಆಡಳಿತ ಮಂಡಳಿಗೆ ಸಲ್ಲಿಸುವುದು.
5. ಮಕ್ಕಳ ರಕ್ಷಣಾ ಸಮಿತಿಯು ಗಮನಿಸಿರುವ ಕಾಳಜಿಗಳನ್ನು ಬಗೆಹರಿಸುವುದು ಮತ್ತು ನಿಗಧಿತ ಅವಧಿಯಲ್ಲಿ ಪೂರ್ಣಗೊಳಿಸುವುದನ್ನು ಖಾತರಿ ಪಡಿಸಿಕೊಳ್ಳುವುದು.
6. ಮಗುವಿನ ರಕ್ಷಣೆ ಮತ್ತು ಸುರಕ್ಷತೆಗೆ ಸಂಬಂಧಿಸಿದ ಎಲ್ಲಾ ರಿಜಿಸ್ಟರ್‌ಗಳು, ಕಡತಗಳು, ಕಡತ ಕೋಶ ಮತ್ತು ದಾಖಲೆಗಳನ್ನು ಮಕ್ಕಳ ರಕ್ಷಣಾ ಸಮಿತಿಯು ನಿರ್ವಹಿಸುವುದು.
7. ಅಗತ್ಯವಿರುವಾಗ ಮಕ್ಕಳ ರಕ್ಷಣಾ ಸಮಿತಿಯು ಬಾಹ್ಯ ನಿಪುಣರ ಸಹಾಯವನ್ನು ಪಡೆಯುವುದು.
8. ಮಕ್ಕಳ ರಕ್ಷಣಾ ಸಮಿತಿಯ ಅವಧಿ 2 ಶೈಕ್ಷಣಿಕ ವರ್ಷಗಳಾಗಿರುತ್ತದೆ. ಖಾಲಿ ಇರುವ ಹುದ್ದೆಯನ್ನು ಒಂದು ತಿಂಗಳೊಳಗೆ ಅಥವಾ ಶೈಕ್ಷಣಿಕ ವಂಷಂಜದಂ ಆರಂಭದಲ್ಲಿ ಭರ್ತಿಮಾಡುವುದು. ಇವುಗಳಲ್ಲಿ ಯಾವುದು ಮೊದಲು ಅದನ್ನು ಪರಿಗಣಿಸುವುದು.
9. ಮಕ್ಕಳ ರಕ್ಷಣಾ ಸಮಿತಿಯು, ಶಿಕ್ಷಣ ಸಂಸ್ಥೆಯ ಮಕ್ಕಳ ರಕ್ಷಣಾ ನೀತಿಯಲ್ಲಿ ನಿಗಧಿಪಡಿಸಿರುವ ಮಾರ್ಗಸೂಚಿಗಳನ್ನು ಅನುಸರಿಸುವುದು.

## ಘಟನೆಗೆ ಸಂಬಂಧಿಸಿದಂತೆ ಮಕ್ಕಳ ರಕ್ಷಣಾ ಸಮಿತಿಯ ಪಾತ್ರ ಮತ್ತು ಜವಾಬ್ದಾರಿಗಳು :

1. ಪ್ರಕರಣ ವರದಿಯಾದಲ್ಲಿ ಮಕ್ಕಳ ರಕ್ಷಣಾ ಸಮಿತಿಯು ಆದಷ್ಟು ಬೇಗನೆ ನಿಯಮಿತ ಅನುಸರಣೆಯೊಂದಿಗೆ ಪ್ರಕರಣ ಅಂತ್ಯಗೊಳ್ಳುವರೆಗೆ ಸಭೆಸೇರುವುದು. ಕಲಂ 5 ರಲ್ಲಿ ಪರಿಶೀಲನಾ ಕಾರ್ಯವಿಧಾನಗಳನ್ನು ವಿವರಿಸಲಾಗಿದೆ.

2. ಘಟನೆಯು ವರದಿಯಾದಾಗ ಮಕ್ಕಳ ರಕ್ಷಣಾ ಸಮಿತಿ ಮತ್ತು ಶಿಕ್ಷಣ ಸಂಸ್ಥೆಯ ಆಡಳಿತವು ಮಗುವಿನ ಹಿತಾಸಕ್ತಿಯನ್ನು ಕಾಪಾಡಲು ಅವರ ಸುರಕ್ಷತೆ, ಭದ್ರತೆ, ಗೌಪ್ಯತೆ ಮತ್ತು ಏಕಾಂತತೆಯ ಹಕ್ಕನ್ನು ಗಮನದಲ್ಲಿಟ್ಟುಕೊಂಡು ತನಿಖೆ ನಡೆಯುವಾಗ ಪೊಲೀಸ್, ನ್ಯಾಯಾಂಗ ಮತ್ತು ಸ್ಥಳೀಯ ಆಡಳಿತದೊಂದಿಗೆ ಕಾನೂನುಗಳಲ್ಲಿ ಕಲ್ಪಿಸಿರುವ ಅವಕಾಶಗಳನ್ವಯ ಸಹಕರಿಸುವುದು.

3. ಮಕ್ಕಳ ರಕ್ಷಣಾ ಸಮಿತಿಯು ಘಟನೆಯಿಂದ ಇತರೆ ಮಕ್ಕಳು, ಅಲ್ಲಿ ಕಾರ್ಯನಿರ್ವಹಿಸುತ್ತಿರುವ ವಯಸ್ಕರು ಮತ್ತು ಶಿಕ್ಷಣ ಸಂಸ್ಥೆಯ ಮೇಲಾಗುವ ಪರಿಣಾಮಗಳನ್ನು ನಿರ್ಣಯಿಸುವುದು ಮತ್ತು ಬಗೆಹರಿಸುವುದು.

4. ಮಕ್ಕಳ ರಕ್ಷಣಾ ಸಮಿತಿಯು ತನ್ನ ಅನುಭವದ ಆದಾರದ ವಿಶ್ಲೇಷಣೆಯನ್ನಾಧರಿಸಿ ಮಕ್ಕಳ ಮೇಲಿನ ಹಲ್ಲೆಗೆ ಅಥವಾ ನಿಂದನೆಗೆ ಕಾರಣವಾದ ಅಂಶಗಳನ್ನು ಅರ್ಥಮಾಡಿಕೊಂಡು ತನ್ನ ಜ್ಞಾನದ ಹಿನ್ನೆಲೆಯಲ್ಲಿ ಶಿಕ್ಷಣ ಸಂಸ್ಥೆಗೆ (ವಯಸ್ಕರು, ವಿದ್ಯಾರ್ಥಿಗಳು, ಮಕ್ಕಳು, ಆಡಳಿತ ಮಂಡಳಿ, ಸೇವಾ ಪೂರೈಕೆದಾರರು) ಮನಶ್ಚೇತನ ತರಬೇತಿಯನ್ನು ಶಿಫಾರಸ್ಸುಮಾಡುವುದು.

## ಅಧ್ಯಕ್ಷರು ಮತ್ತು ಮಕ್ಕಳ ರಕ್ಷಣಾಧಿಕಾರಿಗಳ ಪಾತ್ರ ಮತ್ತು ಜವಾಬ್ದಾರಿಗಳು :

1. **ಅಧ್ಯಕ್ಷರು** : ಪ್ರಾಂಶುಪಾಲರು/ಮುಖ್ಯೋಪಾದ್ಯಾಯರು/ಸಂಸ್ಥೆಯ ಮುಖ್ಯಸ್ಥರು ಮಕ್ಕಳ ರಕ್ಷಣಾ ಸಮಿತಿಯ ಅಧ್ಯಕ್ಷರಾಗಿರುವರು ಮತ್ತು ಅವರು ಕೆಳಕಂಡ ಜವಾಬ್ದಾರಿಗಳನ್ನು ನಿರ್ವಹಿಸುವರು.

- ಕರ್ನಾಟಕ ರಾಜ್ಯ ಮಕ್ಕಳ ರಕ್ಷಣಾ ನೀತಿಯಡಿ ಶಿಕ್ಷಣ ಸಂಸ್ಥೆಗಳಿಗಾಗಿ ಮಕ್ಕಳ ರಕ್ಷಣಾ ನೀತಿಯನ್ನು ರೂಪಿಸುವುದು ಮತ್ತು ಸದರಿ ಮಾರ್ಗಸೂಚಿಗಳನ್ನು ಪಾಲಿಸುವುದು.
- ಶಿಕ್ಷಣ ಸಂಸ್ಥೆಯಲ್ಲಿನ ಎಲ್ಲಾ ಸಿಬ್ಬಂದಿಗಳೊಂದಿಗೆ ಸಹಕರಿಸಿ ಮತ್ತು ಮಾರ್ಗಸೂಚಿಗಳನ್ವಯ ಮಕ್ಕಳ ಮೇಲಿನ ಹಲ್ಲೆಯೂ ಸೇರಿದಂತೆ ಸುರಕ್ಷತಾ ಉಲ್ಲಂಘನೆಗಳನ್ನು ಅಧಿಕೃತ ನಮೂನೆಯಲ್ಲಿ ದಾಖಲಿಸುವುದು.
- ಶಿಕ್ಷಣ ಸಂಸ್ಥೆಯ ಮಕ್ಕಳ ರಕ್ಷಣಾ ನೀತಿಗೆ ಸಂಬಂಧಿಸಿದ ಸಾಮರ್ಥ್ಯಾಭಿವೃದ್ಧಿ ಕಾರ್ಯಕ್ರಮಗಳನ್ನು ಯೋಜಿಸುವುದು ಮತ್ತು ಹಮ್ಮಿಕೊಳ್ಳುವುದು.
- ಶಿಕ್ಷಣ ಸಂಸ್ಥೆಯ ಆಡಳಿತ ಮಂಡಳಿಯ ಸಹಕಾರದೊಂದಿಗೆ, ಶಿಕ್ಷಣ ಸಂಸ್ಥೆಯ ಮಕ್ಕಳ ರಕ್ಷಣಾ ನೀತಿಯ ಅನುಷ್ಠಾನದ ವಾರ್ಷಿಕ ಪರಿಶೀಲನೆಯನ್ನು ನಡೆಸುವುದು ಮತ್ತು ಮಕ್ಕಳ ರಕ್ಷಣಾ ಸಮಿತಿ, ಸಂಬಂಧಿಸಿದ ಸಿಬ್ಬಂದಿಗಳು ಮತ್ತು ಸಂಸ್ಥೆಗಳನ್ನು ಶಿಕ್ಷಣ ಸಂಸ್ಥೆಯ ಮಕ್ಕಳ ರಕ್ಷಣಾ ನೀತಿಯೊಂದಿಗೆ ಪ್ರತಿ ಮೂರು ವಂಷಂಜಗಂಳಿಗೊಮ್ಮೆ ಪರಿಶೀಲಿಸುವುದು.

2. **ಮಕ್ಕಳ ರಕ್ಷಣಾಧಿಕಾರಿ :** ಸಮಿತಿಯ ಅಧ್ಯಕ್ಷರಿಗೆ ಸಹಕಾರವನ್ನು ನೀಡಲು ಶಿಕ್ಷಣ ಸಂಸ್ಥೆಯಲ್ಲಿನ ಬೋಧನಾ ಸಿಬ್ಬಂದಿಯಲ್ಲಿ ಒಬ್ಬರನ್ನು ಮಕ್ಕಳ ರಕ್ಷಣಾಧಿಕಾರಿಯನ್ನಾಗಿ ನೇಮಿಸುವುದು. ಮಕ್ಕಳ ರಕ್ಷಣಾಧಿಕಾರಿಯು ಸಂಸ್ಥೆಯ ಶಾಶ್ವತ ಸಿಬ್ಬಂದಿಯಾಗಿರುವುದು ಮತ್ತು ಮಹಿಳಾ ಸಿಬ್ಬಂದಿಯನ್ನು ನೇಮಿಸಲು ಒತ್ತುನೀಡುವುದು ಹಾಗೂ ಇವರು ಕನಿಷ್ಠ ಐದು ವರ್ಷಗಳ ಅನುಭವವನ್ನು ಹೊದಿರುವುದು. ಮಕ್ಕಳ ರಕ್ಷಣಾಧಿಕಾರಿಯ ಪಾತ್ರ ಮತ್ತು ಜವಾಬ್ದಾರಿಗಳು ಕೆಳಕಂಡಂತಿವೆ.

– ಮೌಖಿಕ ಅಥವಾ ಲಿಖಿತವಾಗಿ ಸ್ವೀಕರಿಸಲಾದ ಮಗುವಿನ ಮೇಲಿನ ಹಲ್ಲೆಯೂ ಸೇರಿದಂತೆ ಮಕ್ಕಳ ಸುರಕ್ಷತಾ ಉಲ್ಲಂಘನೆಯ ಪ್ರಕರಣಗಳನ್ನು ನೋಂದಾಯಿಸಿಕೊಳ್ಳುವುದು ಮತ್ತು ಅದರ ಗೌಪ್ಯತೆಯನ್ನು ಕಾಪಾಡುವುದು.

– ಪ್ರಕರಣಕ್ಕೆ ಸಂಬಂಧಿಸಿದ ದಾಖಲೆ ಮತ್ತು ಕಡತಗಳನ್ನು ಸಮರ್ಪಕವಾಗಿ ನಿರ್ವಹಿಸುವುದು.

– ಮಗುವಿನ ದುರುಪಯೋಗವೂ ಸೇರಿದಂತೆ, ಸುರಕ್ಷತೆಯ ಉಲ್ಲಂಘನೆಯ ಪ್ರಕರಣಗಳನ್ನು ಕಾನೂನು ಸಮ್ಮತವಾಗಿ ವರದಿ ಮಾಡುವುದು, ಪೋಲಿಸ್ ಮತ್ತು ಇತರೆ ಸ್ಥಳೀಯ ಆಡಳಿತದೊಂದಿಗೆ ಸಹಕರಿಸುವುದು ಹಾಗೂ ಘಟನೆಯನ್ನು ಮರೆಮಾಚುವ ಪ್ರಯತ್ನ ಮಾಡುವುದು ಅಥವಾ ಮಕ್ಕಳ ಪೋಷಕರು ಅಥವಾ ಇತರೆ ಪ್ರಾಧಿಕಾರಗಳ ಮೇಲೆ ಪ್ರಭಾವ ಬೀರದಂತೆ ನೋಡಿಕೊಳ್ಳುವುದು.

– ಶಾಲೆಯ ಮುಖ್ಯಸ್ಥರು ಮತ್ತು ಸಮಿತಿಯ ಅಧ್ಯಕ್ಷರ ವಿರುದ್ಧ ಮಕ್ಕಳ ಸುರಕ್ಷತೆಯ ಉಲ್ಲಂಘನೆ ಅಥವಾ ಮಕ್ಕಳ ದುರುಪಯೋಗದ ಆಪಾದನೆಗಳು ಕಂಡುಬಂದಲ್ಲಿಯೂ ಸಹ ನಿಯಮಗಳ ಅನುಸಾರ ಕ್ರಮಕ್ಕೈಗೊಳ್ಳುವುದು.

– ಶಿಕ್ಷಣ ಸಂಸ್ಥೆಯ ಮಕ್ಕಳ ಸಂರಕ್ಷಣಾ ನೀತಿಗೆ ಸಂಬಂಧಿಸಿದ ಸಾಮರ್ಥ್ಯಾಭಿವೃದ್ಧಿ ಚಟುವಟಿಕೆಗಳನ್ನು ಸಂಯೋಜಿಸುವುದು.

## 4.2.2 ಶಾಲಾ ನಿರ್ವಹಣಾ ಸಮಿತಿ (SMC) ಅಥವಾ ಪಾಲಕ-ಶಿಕ್ಷಕರ ಸಂಘ (PTA)

– ಸೂಕ್ತ ಪ್ರಾಧಿಕಾರದಿಂದ ನಿಗಧಿಪಡಿಸಿರುವ ಮಾರ್ಗಸೂಚಿಗಳನ್ವಯ ಶಾಲಾ ನಿರ್ವಹಣಾ ಸಮಿತಿ ಅಥವಾ ಪೋಷಕ-ಶಿಕ್ಷಕರ ಸಂಘವನ್ನು ರಚಿಸುವುದು.
– ಮಕ್ಕಳ ರಕ್ಷಣೆಗೆ ಸಂಬಂಧಿಸಿದಂತೆ ಎಲ್ಲಾ ರಕ್ಷಣಾ ಮತ್ತು ಸುರಕ್ಷತಾ ಅಂಶಗಳು, ಎಲ್ಲಾ ಸಿಬ್ಬಂದಿಗಳ ನಡವಳಿಕೆ ಮತ್ತು ಮನೋಭಾವ, ವಿದ್ಯಾರ್ಥಿಗಳು ಮತ್ತು ಪೋಷಕರ ಸುರಕ್ಷತಾ ಅಂಶಗಳ ಬಗ್ಗೆ ಚರ್ಚಿಸಲು ಶಾಲಾ ನಿರ್ವಹಣಾ ಸಮಿತಿ ಅಥವಾ ಪೋಷಕ ಶಿಕ್ಷಕರ ಸಂಘಗಳು ನಿಯಮಿತವಾಗಿ ಸಭೆಗಳನ್ನು ನಡೆಸುವುದು.

## 4.2.3 ಸಲಹಾ ಪೆಟ್ಟಿಗೆ

ಶಿಕ್ಷಣ ಸಂಸ್ಥೆಯು ಮಕ್ಕಳಿಗಾಗಿ ಸಲಹಾ ಪೆಟ್ಟಿಗೆಯನ್ನು ಹೊಂದಿರುವುದು. ಮಕ್ಕಳು ಸಂಭವಿಸಿದ ಘಟನೆಯನ್ನು ವಯಸ್ಕರಿಗೆ ವರದಿಮಾಡುವ ಬದಲು, ತಮ್ಮ ಕಾಳಜಿಗಳು/ದೂರುಗಳು/ಸಲಹೆಗಳನ್ನು ಸಲಹಾ ಪೆಟ್ಟಿಗೆಯಲ್ಲಿ ಹಾಕಲು ಇಚ್ಚಿಸಬಹುದು. ಈ ವ್ಯವಸ್ಥೆಯನ್ನು ಪರಿಣಾಮಕಾರಿ ಪ್ರತಿಕ್ರಿಯೆಯ ವ್ಯವಸ್ಥೆಯನ್ನಾಗಿ ಬಳಸಲು ಮತ್ತು ಸದೃಢಗೊಳಿಸಲು ಶಿಫಾರಸ್ಸು ಮಾಡಿರುವ ಅಂಶಗಳು ಕೆಳಕಂಡಂತಿವೆ:
– ಮಕ್ಕಳ ಸಂಖ್ಯೆಗೆ ಅನುಗುಣವಾಗಿ ಶಾಲೆಯಲ್ಲಿ ಒಂದಕ್ಕಿಂತ ಹೆಚ್ಚು ಸಲಹಾ ಪೆಟ್ಟಿಗೆಗಳನ್ನು ಮಕ್ಕಳು ಗೌಪ್ಯತೆಯಿಂದ ಬಳಸಲು ಅನುಗುಣವಾಗಿ ವಿವಿಧ ಸ್ಥಳಗಳಲ್ಲಿ ಲಭ್ಯವಿರುವಂತೆ ಇಡುವುದು.

### ಅ. ಸಲಹಾ ಪೆಟ್ಟಿಗೆಯಲ್ಲಿನ ಶಿಫಾರಸ್ಸುಗಳು/ದೂರುಗಳಿಗೆ ಪ್ರತಿಕ್ರಿಯೆ ನೀಡುವಿಕೆ :

– ಮಕ್ಕಳ ರಕ್ಷಣಾಧಿಕಾರಿಯು, ಶಿಫಾರಸ್ಸುಗಳು/ದೂರುಗಳನ್ನು ಮಕ್ಕಳ ಪ್ರತಿನಿಧಿಯ ಸಮ್ಮುಖದಲ್ಲಿ ಓದುವುದು ಮತ್ತು ಅವುಗಳನ್ನು ಸೂಕ್ತ ಕ್ರಮಕ್ಕಾಗಿ ಸುರಕ್ಷತಾ ಉಲ್ಲಂಘನೆಗಳು ಮತ್ತು ಅಸುರಕ್ಷಿತ ಉಲ್ಲಂಘನೆಳೆಂಬುದಾಗಿ ವಿಂಗಡಿಸುವುದು.
– ಮಕ್ಕಳ ರಕ್ಷಣಾಧಿಕಾರಿಯು ಮಗುವಿನ ದುರುಪಯೋಗವು ಸೇರಿದಂತೆ ಮಕ್ಕಳ ಸುರಕ್ಷತೆಯ ಉಲ್ಲಂಘನೆಯ ಪ್ರಕರಣಗಳಿದ್ದಲ್ಲಿ, ಶಿಕ್ಷಣ ಸಂಸ್ಥೆಯ ಮಕ್ಕಳ ರಕ್ಷಣಾ ನೀತಿಯಲ್ಲಿ ಹೇಳಿರುವ ಪ್ರಕ್ರಿಯೆಯನ್ನು ಅನುಸರಿಸುವುದು.
– ಮಕ್ಕಳ ರಕ್ಷಣಾಧಿಕಾರಿಯು ಸಲಹೆಗಳ ಪುಸ್ತಕವನ್ನು ನಿರ್ವಹಿಸುವುದು ಮತ್ತು ದೂರುಗಳೊಂದಿಗೆ ಸಲಹೆಗಳು ಮತ್ತು ತೆಗೆದುಕೊಂಡಿರುವ ಕ್ರಮದ ವರದಿಯನ್ನು ಮಕ್ಕಳೊಂದಿಗೆ ವಿನಿಮಯ ಮಾಡಿಕೊಳ್ಳುವುದು ಹಾಗೂ ಇದನ್ನು ಮಕ್ಕಳ ರಕ್ಷಣಾ ಸಮಿತಿಯು ಪ್ರತಿ ಮೂರು ತಿಂಗಳಿಗೊಮ್ಮೆ ಪರಿಶೀಲಿಸುವುದು.